# ಶಾತವಾಹನರು ಅಥವಾ ಸಾತವಾಹನರು

## ದಕ್ಷಿಣ & ಮಧ್ಯ ಭಾರತದಲ್ಲಿ
## ಮೌರ್ಯರ ಉತ್ತರಾಧಿಕಾರಿಗಳಾದವರು

# ಶಾತವಾಹನ ಪದದ ಅರ್ಥ ವಿವರಣೆ

- ಶಾತವಾಹನರು ಯಾರು, ಶಾತವಾಹನ ಎಂದರೇನು ಎಂಬ ಬಗ್ಗೆ ಜಿಜ್ಞಾಸೆಯಿದೆ
- ಶಾತವಾಹನ ಎಂಬ ಪದ ಶಾಸನಗಳಲ್ಲಿ ಮಾತ್ರ ಕಂಡುಬಂದಿದೆ
- ಶಾತ ಎಂದರೆ ಮೊನಚಾದ, ತೆಳುವಾದ ಎಂದು ಅರ್ಥ
- ಇದಕ್ಕೆ ಚುರುಕಾದ ಎಂಬ ಅರ್ಥವೂ ಇದೆ
- ವಾಹನ ಎಂಬ ಮಾತನ್ನು ಕುದುರೆಗೂ ಅನ್ವಯಿಸಬಹುದು
- ಆಗ ಶಾತವಾಹನ ಎಂದರೆ ಚುರುಕಾದ (ಶೀಘ್ರಗಾಮಿಯಾದ) ಕುದುರೆ ಯನ್ನೇರುವವ ಎಂದಾಗುತ್ತದೆ

# ಇದನ್ನು ಓದಿಕೊಳ್ಳಿರಿ

- ಶಾತಕರ್ಣಿ ಎಂದೂ ಇವರು ತಮ್ಮನ್ನು ಕರೆದುಕೊಂಡಿದ್ದಾರೆ
- ಶಾತಕಣ್ಣಿ ಎಂದರೆ ಚುರುಕಾದ ಕಿವಿ(ಕರ್ಣ) ಉಳ್ಳವನೆಂದರ್ಥ
- ಇವರನ್ನು ಕುರಿತು ನಮಗೆ ಪುರಾಣಗಳಲ್ಲಿ ವಿಶೇಷವಾದ ಮಾಹಿತಿ ದೊರಕುತ್ತದೆಯಾದರೂ ಅಲ್ಲೆಲ್ಲೂ ಇವರನ್ನು ಈ ಹೆಸರಿನಿಂದ ಕರೆದಿಲ್ಲ

## ಪುರಾಣಗಳಲ್ಲಿ ಏನೆಂದು ಕರೆದಿದ್ದಾರೆ?

- ಪುರಾಣಗಳಲ್ಲಿ, ಅವುಗಳಲ್ಲೂ ಮತ್ಸ್ಯ, ವಾಯು, ವಿಷ್ಣು ಮತ್ತು ಭಾಗವತ ಪುರಾಣಗಳಲ್ಲಿ, ಆಂಧ್ರರೆಂದೋ, ಆಂಧ್ರಭೃತ್ಯರೆಂದೋ ಕರೆಯಲಾಗಿದೆ
- ಆಂಧ್ರಭೃತ್ಯ ಎಂಬ ಮಾತಿಗೆ ಆಂಧ್ರರಿಗೆ ಭೃತ್ಯರಾಗಿದ್ದವರೆಂದೂ ಭೃತ್ಯರಾಗಿದ್ದ ಆಂಧ್ರರೆಂದೂ ಎರಡು ಅರ್ಥಗಳನ್ನು ನೀಡಲಾಗಿದೆ

# ಮೂಲದ ಕುರಿತ ಭಿನ್ನಾಭಿಪ್ರಾಯಗಳು

- ಇವರ ಮೂಲ ಪ್ರದೇಶ ಯಾವುದು ಎಂಬುದನ್ನು ಕುರಿತು ಸಹ ಹಲವಾರು ವಿರೋಧಾಭಿಪ್ರಾಯಗಳಿವೆ
- ಇವರ ಪ್ರಾಚೀನ ಶಾಸನಗಳೆಲ್ಲ ಪಶ್ಚಿಮ ತೀರದಲ್ಲಿ, ಮಹಾರಾಷ್ಟ್ರದ ನಾಸಿಕ್, ನಾನಾಘಾಟ್, ಕಾರ್ಲೆ ಮುಂತಾದ ಸ್ಥಳಗಳಲ್ಲಿ ಲಭಿಸಿವೆ
- ಕ್ರಿ.ಪೂ. 1ನೆಯ ಶತಮಾನಕ್ಕೆ ಸೇರಿದ ಒರಿಸ್ಸದ ಖಾರವೇಲನ ಹಾಥಿಗುಂಫಾ ಶಾಸನದಲ್ಲಿ ತನ್ನ ರಾಜ್ಯದ ಪಶ್ಚಿಮದಲ್ಲಿ ರಾಜ್ಯವನ್ನಾಳುತ್ತಿದ್ದ ಶಾತಕರ್ಣಿಯನ್ನು ಲೆಕ್ಕಿಸದೆ ಆತ ಬೃಹತ್ ಸೈನ್ಯವನ್ನು ಪಶ್ಚಿಮಾಭಿಮುಖವಾಗಿ ಕಳುಹಿಸಿದನೆಂದು ಹೇಳಿದೆ
- ಇದನ್ನವಲಂಬಿಸಿ ಶಾತಕರ್ಣಿಯ ರಾಜ್ಯ ಕಲಿಂಗದೇಶದ ಪಶ್ಚಿಮಕ್ಕಿದ್ದಿತೇ ಹೊರತು, ದಕ್ಷಿಣದ ಆಂಧ್ರವಾಗಿರಲಿಲ್ಲ ಎಂಬುದೊಂದು ವಾದ

# ಪುರಾಣಗಳ ರಚನೆಯ ಕಾಲಕ್ಕೆ ಪಶ್ಚಿಮದಿಂದ ಪೂರ್ವಕ್ಕೆ

- ಆರಂಭದಲ್ಲಿ ಈ ಶಾತವಾಹನರು ಪಶ್ಚಿಮ ಭಾಗದಲ್ಲಿದ್ದು ಕ್ರಮೇಣ ಪೂರ್ವಭಾಗಕ್ಕೆ ಸರಿದರೆಂದೂ ಪುರಾಣಗಳು ತಮ್ಮ ಅಂತಿಮರೂಪವನ್ನು ತಾಳಿದ ಸು. 3ನೆಯ ಶತಮಾನದ ವೇಳೆಗೆ ಇವರು ಆಂಧ್ರದಲ್ಲಿ ನೆಲಸಿದ್ದರೆಂದೂ ಎಂತಲೇ ಇವರನ್ನು ಪುರಾಣಗಳಲ್ಲಿ ಆಂಧ್ರರೆಂದು ಹೆಸರಿಸಲಾಗಿದೆಯೆಂದೂ ಹಲವಾರು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ
- ಈ ವಾದಗಳನ್ನು ಅಲ್ಲಗಳೆದು ಕೃಷ್ಣಾ, ಗೋದಾವರೀ ನದಿಗಳ ನಡುವಣ ಆಂಧ್ರಪ್ರದೇಶದ ಭಾಗ ಇವರ ಮೂಲಸ್ಥಾನ ವೆಂದೂ ಕೃಷ್ಣಾನದೀತೀರದ ಶ್ರೀಕಾಕುಳಂ ಇವರ ರಾಜಧಾನಿಯಾಗಿತ್ತೆಂದೂ ಇವರು ಕ್ರಮೇಣ ಪಶ್ಚಿಮದಿಕ್ಕಿನ ಕಡೆ ತಮ್ಮ ಪ್ರಭಾವವನ್ನು ಬೆಳೆಸುತ್ತ ಹೋದರೆಂದೂ ಕೆಲವರು ವಾದಿಸಿದ್ದಾರೆ
- ಈ ವಾದಗಳು ಸದ್ಯಕ್ಕೆ ಅಷ್ಟು ಸಮರ್ಪಕವಾಗಿಲ್ಲ.

# ಆಳ್ವಿಕೆಯ ಕಾಲ & ಅರಸರ ಸಂಖ್ಯೆಯ ಕುರಿತ ಗೊಂದಲಗಳು

- ಇವರ ಆಳಿಕೆಯ ಕಾಲ, ವಂಶಕ್ಕೆ ಸೇರಿದ ಅರಸರ ಸಂಖ್ಯೆ ಇತ್ಯಾದಿಗಳನ್ನು ಕುರಿತು ಪುರಾಣಗಳಲ್ಲಿ ಭಿನ್ನಾಭಿಪ್ರಾಯಗಳಿವೆ
- ಸಾಮಾನ್ಯವಾಗಿ ಒಟ್ಟು **30** ಅರಸರು ಆಳಿದರೆಂದು ಹೇಳಿದ್ದರೂ ಇವರ ಆಳಿಕೆಯ ಕಾಲ **300** ವರ್ಷಗಳಿಂದ **460** ವರ್ಷಗಳವರೆಗೂ ಹೋಗಿದೆ
- ಮತ್ಸ್ಯ ಪುರಾಣದಲ್ಲಿ **25** ಅರಸರು ಆಳಿದರೆಂದು ಹೇಳಿದ್ದರೂ **30** ಅರಸರನ್ನು ಕುರಿತು ವಿವರಗಳಿವೆ
- ವಾಯುಪುರಾಣದಿಂದ **17** ಅರಸರು ಸು. **273** ವರ್ಷಗಳು ಮಾತ್ರ ಆಳಿದರೆಂದು ತಿಳಿದಿದೆ
- ಭಾಗವತಪುರಾಣದಲ್ಲಿ **22** ಅರಸರನ್ನು ಕುರಿತು ಮಾತ್ರ ವಿವರಗಳು ಲಭಿಸಿವೆ
- ಈ ಅರಸರಲ್ಲಿ ಅನೇಕರ ಹೆಸರುಗಳು ಇತರ ಯಾವ ಆಧಾರಗಳಿಂದಲೂ ತಿಳಿದುಬಂದಿಲ್ಲ.

# ಶಾತವಾಹನರ ಆಡಳಿತಾರಂಭ ಯಾವಾಗ ಆಯಿತು?

- ಚಂದ್ರಗುಪ್ತಮೌರ್ಯ ಆಳತೊಡಗಿದುದು ಸಾ.ಶ.ಪೂ. 324ರಲ್ಲಿ.
- ಬಳಿಕ ಶುಂಗರು 112 ವರ್ಷಗಳು, ಅನಂತರ ಬಂದ ಕಣ್ವರು 45 ವರ್ಷಗಳು ಆಳಿದರು
- ಎಂದಮೇಲೆ, ಕಣ್ವಮನೆತನ ಸಾ.ಶ.ಪೂ. 33ರಲ್ಲಿ ಕಣ್ಮರೆಯಾಯಿತು
- ಇದಕ್ಕೆ ಕಾರಣ ಸೀಮುಕ. ಈತನ ಆಳಿಕೆ ಆ ವರ್ಷದಿಂದ ಆರಂಭವಾಯಿತೆಂದು ಒಂದು ಅಭಿಪ್ರಾಯ
- ಆದರೆ ಕಣ್ವವಂಶದ ಕೊನೆಯ ಅರಸ ಸುಶರ್ಮನನ್ನು ಸೋಲಿಸಿದಾತ ಸೀಮುಕನಲ್ಲವೆಂದೂ, ಸೀಮುಕ ಎಂಬಾತ ಶಾತವಾಹನರ ಅರಸರಲ್ಲಿ ಅನಂತರ ಆಳಿಕೆಗೆ ಬಂದಾತನೆಂದೂ, ಮತ್ಸ್ಯ ಪುರಾಣದಲ್ಲಿ ಹೇಳಿದಂತೆ ಶಾತವಾಹನರು 460 ವರ್ಷಗಳ ಕಾಲ ಆಳಿದ್ದು, ಸೀಮುಕ ಸಾ.ಶ.ಪೂ. 271ರಲ್ಲಿ ಆಳಿಕೆಗೆ ಬಂದನೆಂದೂ ಕೆಲವರು ವಾದಿಸಿದ್ದಾರೆ
- ಇನ್ನೂ ಕೆಲವರು ಕಣ್ವಮನೆತನದ ಸುಶರ್ಮನನ್ನು ಸೋಲಿಸಿದಾತ ಶಾತವಾಹನರ ಹದಿನೈದನೆಯ ಅರಸನಾದ ಮೊದಲನೆಯ ಪುಳುಮಾವಿ ಎಂದೂ ವಾದಿಸಿದ್ದಾರೆ.

# ಶಾಸನಗಳು

- ಇವರ ತಕ್ಕಷ್ಟು ದೊಡ್ಡದಾದ ಮತ್ತು ಐತಿಹಾಸಿಕವಾಗಿ ಬಹುಪ್ರಮುಖವಾದ ಶಾಸನಗಳು ನಾನಾಘಾಟ್, ನಾಸಿಕ್, ನಾಗಾರ್ಜುನಕೊಂಡ, ಜಗ್ಗಯ್ಯಪೇಟೆ ಮೊದಲಾದ ಸ್ಥಳಗಳಲ್ಲಿ ದೊರೆತಿದ್ದರೂ ಕರ್ನಾಟಕದಲ್ಲಿ ಅಂಥಹ ಶಾಸನಗಳಿಲ್ಲವೆಂದೇ ಹೇಳಬೇಕು
- ಕರ್ನಾಟಕದಲ್ಲಿ ದೊರೆತಿರುವ ಇವರ ಶಾಸನಗಳಲ್ಲಿ ದೊಡ್ಡದಾದುದೆಂದರೆ ಮಳವಳ್ಳಿಯ ಸ್ತಂಭಶಾಸನ
- ಇದಲ್ಲದೆ ಬನವಾಸಿ, ಸನ್ನತಿ, ಬೆಳ್ವಾಡಗಿ, ಚುರುಸುಗುಂಡಿ, ಹಂಪೆಗಳಲ್ಲಿ ಈ ಕಾಲಕ್ಕೆ ಸೇರಿರಬಹುದಾದ ಹಲವಾರು ಶಾಸನಗಳು ದೊರೆತಿವೆ

# ಮುಂದುವರಿದಿದೆ

- ಸಾ.ಶ.ಪೂ. ಸು.1ನೆಯ ಶತಮಾನದಿಂದ ಕ್ರಿ.ಶ.ಸು.3ನೆಯ ಶತಮಾನದವರೆಗಿನ ಕಾಲಕ್ಕೆ ಸೇರಿದ ಈ ಶಾಸನಗಳು ಬ್ರಾಹ್ಮೀಲಿಪಿ ಮತ್ತು ಪ್ರಾಕೃತಭಾಷೆಗಳಲ್ಲಿವೆ
- ಬನವಾಸಿಯಲ್ಲಿ ದೊರೆತ ಒಂದು ಶಾಸನ ಸು.2ನೆಯ ಶತಮಾನದ ಮಧ್ಯಭಾಗದಲ್ಲಿ ಆಳುತ್ತಿದ್ದ ವಾಶಿಷ್ಠೀಪುತ್ರ ಶಿವಶ್ರೀ ಪುಳುಮಾವಿಯ ಆಳಿಕೆಗೆ ಸೇರಿದ್ದು, ಅದು ಆತನ ರಾಣಿಯ ನೆನಪಿಗಾಗಿ ಹಾಕಿಸಿದ ಸ್ಮರಣ ಶಾಸನವಾಗಿದೆ
- ಆದರೆ ಆ ರಾಣಿಯ ಹೆಸರನ್ನು ತಿಳಿಸಿಲ್ಲ

# ಮಳವಳಿಯ ಶಾಸನದ ವಿಷಯವೇನು?

- ಮಳವಳ್ಳಿಯ ಸ್ತಂಭಶಾಸನ ಶಾತವಾಹನರ ಮಾಂಡಲಿಕನಾಗಿದ್ದ, ಚುಟುವಂಶಕ್ಕೆ ಸೇರಿದ ಚುಟುಕುಲಾನಂದನ ಎರಡನೆಯ ಆಳಿಕೆಯ ವರ್ಷಕ್ಕೆ ಸೇರಿದ್ದಾಗಿದೆ
- ರಾಜನು ಮಳ್ಳಪಳ್ಳಿ ದೇವರಿಗೆ ಸಹಲಾಟವಿ ಗ್ರಾಮವನ್ನು ದತ್ತಿಯಾಗಿ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ
- ಇದೇ ರಾಜನ 12ನೆಯ ಆಳಿಕೆಯ ವರ್ಷಕ್ಕೆ ಸೇರಿದುದು ಬನವಾಸಿಯಲ್ಲಿರುವ ನಾಗರಕಲ್ಲಿನ ಶಾಸನ
- ಮಹಾಭೋಜ ನೆಂಬೊಬ್ಬನ ಹೆಂಡತಿ ಶಿವಸ್ಕಂದ ನಾಗಶ್ರೀ ಕೆರೆ, ವಿಹಾರಗಳನ್ನು ಕಟ್ಟಿಸಿ ಈ ಶಾಸನವಿರುವ ನಾಗರಕಲ್ಲನ್ನು ಮಾಡಿಸಿದುದಾಗಿ ಶಾಸನದಿಂದ ತಿಳಿದುಬರುತ್ತದೆ
- ಸನ್ನತಿಯ ಒಂದು ಲಘುಶಾಸನದಲಿ ವಾಶಿಷ್ಠೀಪುತ್ರ ಸಿರಿಶಾತ ಎಂದಿದ್ದು ಅದು ವಾಶಿಷ್ಠೀಪುತ್ರ ಶ್ರೀ ಶಾತಕರ್ಣಿಯನ್ನು ನಿರ್ದೇಶಿಸುವುದಾಗಿದೆ

# ಮುಂದುವರಿದಿದೆ

- ಹಾಗೆಯೇ ಹಂಪೆಯಲ್ಲಿ ಉತ್ಖನನದಲ್ಲಿ ದೊರೆತ ಸ್ತಂಭಶಾಸನವು ಬೌದ್ಧವಿಹಾರವೊಂದಕ್ಕೆ ದತ್ತಿಬಿಟ್ಟುದನ್ನು ಸೂಚಿಸುವಂತೆ ತೋರುತ್ತದೆ
- ಈ ಶಾಸನಗಳ ವ್ಯಾಪ್ತಿಯಿಂದ ಶಾತವಾಹನರು ಅಥವಾ ಅವರ ಸಾಮಂತರಾದ ಚುಟುಕುಲ ಶಾತಕರ್ಣಿಗಳು ಕರ್ನಾಟಕದ ಬಹುಭಾಗವನ್ನು ಆಳುತ್ತಿದ್ದರೆಂಬುದು ವಿದಿತವಾಗುತ್ತದೆ

# ರಾಜಧಾನಿಗಳು

- ಈಗಿನ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಗೋದಾವರಿಯ ಉತ್ತರತೀರದ ಪೈಠಣ ಹಾಗೂ

- ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಧನಕಟ-ಧಾನ್ಯಕಟಕ-ಧರಣೀಕೋಟೆ- ಇವರ ರಾಜಧಾನಿಗಳಾಗಿ ಮೆರೆದುವು.

# ರಾಜಕೀಯ ಇತಿಹಾಸ - ಆರಂಭದ ಅರಸರು

- ಈ ವಾದವಿವಾದಗಳೇನೇ ಇರಲಿ, ಶಾತವಾಹನರು ದಖನ್ನಿನಲ್ಲಿ ಮೌರ್ಯರ ಅನಂತರ ಅವರ ಉತ್ತರಾಧಿಕಾರಿಗಳಾಗಿ ಆಳಿದ ಅರಸುಗಳೆಂ ಬುದು ನಿಜ
- ಸೀಮುಕ, ಆತನ ಸೋದರ ಕೃಷ್ಣ, ಕೃಷ್ಣನ ಮಗ ಶಾತಕರ್ಣಿ-ಇವರು ಆರಂಭದ ಅರಸರು
- ಇವರು ಕ್ರಮವಾಗಿ 23, 18 ಮತ್ತು 18 ವರ್ಷಗಳ ಕಾಲ ಆಳಿದರು
- ಶಾತಕರ್ಣಿ ಒಂದು ರಾಜಸೂಯ, ಎರಡು ಅಶ್ವಮೇಧ ಹಾಗೂ ಇತರ ವೈದಿಕಯಾಗಗಳನ್ನು ಮಾಡಿದನೆಂದು ಹೇಳಿದೆ
- ರಥಿಕ ಮತ್ತು ಭೋಜಕ ವಂಶಗಳಿಗೆ ಸೇರಿದ ಈತನ ಸೇನಾನಿಗಳ ನೆರವಿನಿಂದ ರಾಜ್ಯವನ್ನು ವಿಸ್ತರಿಸಿದ
- ಅನಂತರ ಈ ಸೇನಾನಾಯಕರು ಪ್ರಾಂತಾಧಿಕಾರಿಗಳಾದರು
- ಶಾತಕರ್ಣಿಯ ಪತ್ನಿ ನಾಗನಿಕಾ ಮಹಾರಥಿಕ ವಂಶದವಳು

# ನೇಪಥ್ಯ ಮತ್ತು ಗೌತಮೀಪುತ್ರ ಶಾತಕರ್ಣಿ ಆಳಿಕೆಯ ಕಾಲ ಸು.ಸಾ.ಶ.ವ. 106ರಿಂದ 130

- ಶಾತಕರ್ಣಿಯ ಅನಂತರದ ಒಂದು ಶತಮಾನ ಕಾಲ ಶಾತವಾಹನರು ತೆರೆಯ ಮರೆಯಲ್ಲಿ ಇರಬೇಕಾಯಿತು
- ಆಗ ಭಾರತದಲ್ಲಿ ಗ್ರೀಕರು, ಶಕರು ದಂಡೆತ್ತಿ ಬಂದು ಭಾರತದ ರಾಜಕೀಯದಲ್ಲಿ ಅಭದ್ರತೆ ಉಂಟುಮಾಡಿದ್ದರು
- ಅದರ ಪ್ರಭಾವ ಶಾತವಾಹನರಿಗೂ ತಟ್ಟಿತ್ತು
- ಆದರೆ ಶಾತವಾಹನರ ಗೌತಮೀಪುತ್ರ ಶಾತಕರ್ಣಿ ಈ ಅರಸರ ಶಕ್ತಿಯನ್ನು ಪುನಶ್ಚೇತನಗೊಳಿಸಿದ
- ಶಕರ ಅರಸನಾದ ಕ್ಷಹರಾತಕುಲದ ನಹಪಾಣನನ್ನು ಸೋಲಿಸಿ ಅಪರಾಂತ, ಅನೂಪ, ಸೌರಾಷ್ಟ್ರ, ಅಕರ, ಅವಂತಿ ಮುಂತಾದ ಪ್ರದೇಶಗಳನ್ನು ವಶಪಡಿಸಿ ಕೊಂಡ

# ಗೌತಮೀಪುತ್ರ ಶಾತಕರ್ಣಿಯ ರಾಜ್ಯ ವಿಸ್ತಾರ ಬಿರುದುಗಳು

- ಇವನ ರಾಜ್ಯ ಕೊಂಕಣ, ಸೌರಾಷ್ಟ್ರ, ಮಾಳವ, ಬೀರಾರ್ ಮತ್ತು ಕೃಷ್ಣಾ ಕಣಿವೆ ಪ್ರದೇಶಗಳವರೆಗೂ ವಿಸ್ತರಿಸಿ, ಉತ್ತರ ಕರ್ನಾಟಕದ ಬಹುಭಾಗವೂ ಇವನ ವಶವಾಯಿತು
- ಕ್ಷಹರಾತವಂಶನಿರವಶೇಷಕರ - ಕ್ಷಹರಾತ ವಂಶವನ್ನು ನಿರ್ನಾಮಮಾಡಿದವನು
- ತ್ರಿಸಮುದ್ರತೋಯಪೀತವಾಹನ = ಮೂರು ಸಮುದ್ರಗಳ ನೀರನ್ನು ಕುಡಿದ ಕುದುರೆಯನ್ನು ವಾಹನವಾಗಿ ಹೊಂದಿದವನು
- ಶಾತವಾಹನಯಶಃ ಪ್ರತಿಷ್ಠಾಪನಕರ - ಶಾತವಾಹನರ ಯಶಸ್ಸನ್ನು ಪ್ರತಿಷ್ಠಾಪಿಸಿದವನು
- ಇದರಿಂದ ಶಾತವಾಹನರ ಯಶಸ್ಸು ಪುನಃ ಪ್ರತಿಷ್ಠಾಪಿತ ವಾಯಿತು
- ಈ ಘಟನೆ ನಡೆದುದು ಸು. 124-25ರಲ್ಲಿ.

# ಗೌತಮಿಪುತ್ರ ಶಾತಕರ್ಣಿಯ ಕೊನೆಯ ದಿನಗಳು

- ನಾಸಿಕದಲ್ಲಿ ದೊರೆತ ಈತನ ಮಗ ವಾಶಿಷ್ಠೀಪುತ್ರ ಪುಳುಮಾವಿಯ ಶಾಸನದಲ್ಲಿ ಈತನನ್ನು ಮುಕ್ತಕಂಠದಿಂದ ಹೊಗಳಲಾಗಿದೆ
- ಇಷ್ಟಾದರೂ ಈತನ ಅಂತ್ಯ ದಾರುಣ ರೀತಿಯಲ್ಲಾಯಿತು
- ಏಕೆಂದರೆ, ಮಹಾಕ್ಷತ್ರಪನೆನಿಸಿದ ಶಕರ ಕುಲದ ಕಾರ್ದಮಕ ವಂಶಕ್ಕೆ ಸೇರಿದ ಚಷ್ಟನನ ಮೊಮ್ಮಗ ರುದ್ರದಾಮ ಈತನನ್ನು ಕದನದಲ್ಲಿ ಸೋಲಿಸಿದ
- ಅದರ ಪರಿಣಾಮವಾಗಿ ಈತನ ರಾಜ್ಯದ ಉತ್ತರದ ಹಲವು ಭಾಗಗಳು ಈತನ ಕೈಬಿಟ್ಟುವು

# ಗೌತಮಿಪುತ್ರನ ಉತ್ತರಾಧಿಕಾರಿಗಳು

- ಈತನ ಮಗ ವಾಶಿಷ್ಠೀಪುತ್ರ ಪುಲಮಾಯಿ (130-59) ರಾಜ್ಯವನ್ನು ಪೂರ್ವದಿಕ್ಕಿನಲ್ಲಿ ವಿಸ್ತರಿಸಿ ಕೃಷ್ಣಾನದಿಯ ಮುಖಜ ಪ್ರದೇಶಗಳನ್ನು ಆಕ್ರಮಿಸಿದ ಕರ್ನಾಟಕದ ಬಳ್ಳಾರಿ ಜಿಲ್ಲೆ ಸಹ ಆಗ ಈತನ ವಶವಾದಂತೆ ತೋರುತ್ತದೆ ಇವನ ಅನಂತರ ಕ್ರಮವಾಗಿ ಶಿವಶ್ರೀ ಶಾತಕರ್ಣಿ (159-66) ಶಿವಸ್ಕಂಧ ಶಾತಕರ್ಣಿ (166-74) ಯಜ್ಞಶ್ರೀ ಶಾತಕರ್ಣಿ (174-203) ಆಳಿದರು
- ಈ ಮನೆತನದ ಕೊನೆಯ ಖ್ಯಾತ ಅರಸನಾದ ಯಜ್ಞಶ್ರಿ ಶಾತಕರ್ಣಿಯು ಶಕರನ್ನು ಸೋಲಿಸಿ ಉತ್ತರ ಮತ್ತು ಪಶ್ಚಿಮಭಾರತದ ಪ್ರದೇಶಗಳಿಂದ ಅವರನ್ನು ಹೊರಗಟ್ಟಿದ
- ಈತನ ಬಳಿಕ ಶಾತವಾಹನರ ಬಲ ಕ್ರಮೇಣ ಕುಗ್ಗಿತು

# ಶಾತವಾಹನರ ಶಾಖೆಗಳು & ಕರ್ನಾಟಕದಲ್ಲಿ ಶಾತವಾಹನರು

- ಶಾತವಾಹನ ಕುಲಕ್ಕೆ ಸೇರಿದ ಕೆಲವು ಶಾಖೆಗಳವರು ಪೈಠಣ ಮತ್ತು ಕುಂತಲ ದೇಶ ಹಾಗೂ ಬನವಾಸಿ-ಇವುಗಳಿಂದ ಆಳುತ್ತಿದ್ದರು
- ಕರ್ನಾಟಕದ ಶಾತವಾಹನರಲ್ಲಿ ಕುಂತಲ ಶಾತಕರ್ಣಿ ಮತ್ತು ಹಾಲ ಪ್ರಮುಖರು
- ಪುರಾಣಗಳಲ್ಲಿ ಕುಂತಲ ಶಾತಕರ್ಣಿಯ ಪ್ರಸ್ತಾಪವಿದೆ. ವಾತ್ಸ್ಯಾಯನನ ಕಾಮಸೂತ್ರದಲ್ಲೂ ಈ ಅರಸನ ಹೆಸರಿದೆ
- ಕಾವ್ಯ ಮೀಮಾಂಸದ ಕರ್ತೃವಾದ ರಾಜಶೇಖರನೂ ಕುಂತಲದ ಅರಸನೊಬ್ಬ ಶಾತವಾಹನನಾಗಿದ್ದನೆಂದಿದ್ದಾನೆ

# ಬನವಾಸಿಯಲ್ಲಿನ ಶಾತವಾಹನರ ದಾಖಲೆಗಳು

- ಪ್ರಾಕೃತಭಾಷೆಯ ಗಾಥಾಸತ್ತಸ್ಸೈ (ಗಾಥಾಸಪ್ತಶತಿ) ಎಂಬ ಕೃತಿಯ ಕರ್ತೃವಾದ ಹಾಲ ಒಬ್ಬ ಕವಿ
- ಶಾಂತಿವರ್ಮನ ತಾಳಗುಂದ ಶಾಸನದಲ್ಲಿ ಕದಂಬರಿಗೂ ಮೊದಲು ಶಾತಕರ್ಣಿ ಮತ್ತು ಇತರ ಅರಸರು ಅಲ್ಲಿನ ಪ್ರಣವೇಶ್ವರ ದೇವರನ್ನು ಅರ್ಚಿಸುತ್ತಿದ್ದರೆಂದು ಹೇಳಿದೆ
- ನಾಸಿಕದ ಶಾಸನದಲ್ಲಿ ಗೌತಮೀಪುತ್ರ ಶಾತಕರ್ಣಿಯು ವೈಜಯಂತೀಯಲ್ಲಿದ್ದಾಗ (ಈಗಿನ ಬನವಾಸಿ) ಆಜ್ಞೆ ಒಂದನ್ನು ಹೊರಡಿಸಿದನೆಂದು ಹೇಳಿದೆ
- ಇತ್ತೀಚೆಗೆ (1974) ಬನವಾಸಿಯಲ್ಲಿಯೇ ವಾಶಿಷ್ಠೀಪುತ್ರನ ಮಗ ಶಿವಶ್ರೀ ಪುಳುಮಾವಿಯ ಮಹಾದೇವಿಯ (ಅರಸಿ) ಸ್ಮಾರಕಶಿಲಾ ಶಾಸನವೊಂದು ದೊರೆತಿದೆ

# ಸಾತಾವಾಹನಿಹಾರ , ಶಾತಹನಿರಟ್ಟ ಎಂದರೇನು?

- ಬಳ್ಳಾರಿಯ ಸಮೀಪದ ಮ್ಯಾಕದೋಣಿಯಲ್ಲಿ 3ನೆಯ ಶತಮಾನಕ್ಕೆ ಸೇರಿದ ಪುಳುಮಾವಿಯ ಶಾಸನವೊಂದಿದೆ
- ಇದರಲ್ಲಿ ಸಾತಾವಾಹನಿಹಾರ ಎಂಬ ಭೌಗೋಳಿಕ ಭಾಗವನ್ನು ಹೆಸರಿಸಿದೆ
- ಹಿರೇಹಡಗಲಿಯಲ್ಲಿ ದೊರೆತ ಪಲ್ಲವ ಶಿವಸ್ಕಂಧವರ್ಮನ ತಾಮ್ರಶಾಸನದಲ್ಲಿ ಆ ಸುತ್ತಲಿನ ಪ್ರದೇಶ, ಶಾತಹನಿರಟ್ಟಕ್ಕೆ (ಶಾತವಾಹನ ರಾಷ್ಟ್ರ) ಸೇರಿದುದೆಂದು ಹೇಳಿದೆ
- ಇವುಗಳಿಂದ ಶಾತವಾಹನ ಕುಲದ ಅನೇಕ ಅರಸರು ಕರ್ನಾಟಕದಲ್ಲೂ ಆಳಿದರೆಂಬುದು ಸ್ಪಷ್ಟವಾಗುತ್ತವೆ
- ಚುಟು ಮುಂತಾದ ಶಾತವಾಹನರ ಸಾಮಂತರ ಹಲವಾರು ನಾಣ್ಯಗಳು ಕರ್ನಾಟಕದ, ಚಿತ್ರದುರ್ಗ ಹಾಗೂ ಕಾರವಾರ ಜಿಲ್ಲೆಗಳಲ್ಲಿ, ಮತ್ತಿತರ ಕೆಲವು ಕಡೆಗಳಲ್ಲಿ ದೊರೆತಿವೆ